**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು**

**ಇವರ ನ್ಯಾಯಾಲಯದಲ್ಲಿ**

**MVC** : 414/2022

ಆರ್ ಡಬ್ಲು – 1

ಸಾಕ್ಷಿಯ ಹೆಸರು : ಎಂ ಎನ್ ಶರತ್ ಬಾಬು

ತಂದೆ ಹೆಸರು : ಎಂ ಟಿ ನಾಗರಾಜ

ವಯಸ್ಸು : 34 ವರ್ಷ

ಉದ್ಯೋಗ : ಅಡ್ಮಿನಿಸ್ಟ್ರೇಟಿವ್ ಆಫೀಸರ್ ಯುನೈಟೆಡ್ ಇಂಡಿಯ ಇನ್ಸುರೆನ್ಸ್ ಕಂ.

ವಾಸ : ಚಿತ್ರದುರ್ಗ

ಸಾಕ್ಷಿಯನ್ನು ದಿಃ 24.07.2025 ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ : 3 ನೇ ಎದುರುದಾರರ ಪರ ಶ್ರೀ. ಬಿ ಎಂ ಆರ್ ಸಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ವಿಮಾ ಪಾಲಿಸಿ ಮತ್ತು ಬಿ ರಿಜಿಸ್ಟರ್ ಎಕ್ಸಾಟ್ರಾಕ್ಟ್ ನ್ನು ಹಾಜರು ಪಡಿಸಿದ್ದು ನಿಆರ್ – 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್ ಟಿ ಎಸ್ ವಕೀಲರಿಂದ**

ವಾಹನದ ಮಾಲೀಕರು ಜೋಳ ಕಟಿಂಗ್ ಮಾಡುವ ಯಂತ್ರವನ್ನು ಅಳವಡಿಸಲು ಅನುಮತಿ ಪಡೆದುಕೊಂಡು ಜೋಡಿಸಿದ್ದಾರೆ ಎಂದರೆ ಸರಿಯಲ್ಲ. ಜೋಳದ ತೆನೆಯನ್ನು ಬೇರ್ಪಡಿಸುವ ಮಿಷನನ್ನು ನಾನು ಜೋಳದ ಕಟಿಂಗ್ ಮಿಷನ್ ಎಂದು ಹೇಳುತ್ತಿದ್ದೇನೆ ಎಂದರೆ ನಿಜ . ನಾನು ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ ಅಂಶಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ . ನಾನು 1 ನೇ ಎದುರುದಾರರಿಗೆ ವಿಮಾ ಪಾಲಿಸಿ ನೀಡಿಲ್ಲ . ನಾನು 2 ನೇ ಎದುರುದಾರರಿಗೆ ವಿಮೆ ಪಾಲಿಸಿ ನೀಡಿರುತ್ತೇನೆ . 3 ನೇ ವ್ಯಕ್ತಿಗೆ ಸಂಬಂದಿಸಿದ ವಿಮೆ ಆಗಿರುವುದರಿಂದ ಕಂಪನಿಯೇ

ಪರಿಹಾರದ ಹಣವನ್ನು ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ . ಪರಿಹಾರದ ಹಣವನ್ನು ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು 1 ನೇ ಎದುರುದಾರರ ಪರ ಶ್ರೀ ಎಸ್ ಸಿ ಜೆ ವಕೀಲರಿಂದ**

ಜೋಳದ ಮಿಷನನ್ನು ಟ್ರಾಕ್ಟರ್ ಗೆ ಜೋಡಿಸುವ ಸಲುವಾಗಿ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ . ಆ ಮಿಷನ್ ಟ್ರಾಕ್ಟರ್ ಗೆ ಜೋಡಣೆ ಮಾಡಲು ಇರುವುದರಿಂದ ಅದಕ್ಕೆ ಅನುಮತಿ ನೀಡಿದ್ದಾರೆ ಎಂದರೆ ಸರಿಯಲ್ಲ . ಜೋಳದ ಮಿಷನನ್ನು ಕೇವಲ ಹೊಲದಲ್ಲಿ ಮಾತ್ರ ಉಪಯೋಗಿಸುತ್ತಾರೆ ಎಂದರೆ ನಿಜ. ನಾನು ಪರಿಹಾರದ ಹಣ ಪಾವತಿಸಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು